2016 ಕ.ತೀ.ವ. 598

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ್

ಶ್ರೀಮತಿ ರಾಜೇಶ್ವರಿ ಜಿ. ಭೂಯರ್ ಮತ್ತು ಇತರರು –ವಿರುದ್ಧ–
ಸಿಂಧು ಟ್ರಾವೆಲ್ಸ್ ಮತ್ತು ಇನ್ನೊಬ್ಬರು*

ಮೋಟಾರು ವಾಹನ ಅಧಿನಿಯಮ ಕಲಂ 173(1) ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಮೋಟಾರು ವಾಹನ ಅಪಘಾತವೊಂದರಲ್ಲಿ ಮೃತಪಟ್ಟ ವ್ಯಕ್ತಿಯ ವಾರಸುದಾರರಾದ ಮೇಲ್ಮನವಿದಾರರು ನ್ಯಾಯಾಧಿಕರಣದಲ್ಲಿ ಸಲ್ಲಿಸಿದ್ದ ಕ್ಲೇಮು ಅರ್ಜಿಯನ್ನು ಭಾಗಶಃ ಪುರಸ್ಕರಿಸಿದ ಐತೀರ್ಪನ್ನು ಪ್ರಶ್ನಿಸಿ ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಸದರಿ ಮೇಲ್ಮನವಿ.

ಎರಡೂ ಪಕ್ಷದವರ ವಾದ ವಿವಾದವನ್ನು ಆಲಿಸಿದ ಉಚ್ಚ ನ್ಯಾಯಾಲಯವು ಸಮೂಹ ವೈಯಕ್ತಿಕ ಅಪಘಾತ ಕ್ಲೇಮು ಪ್ರಯೋಜನಗಳಡಿಯಲ್ಲಿ ಕ್ಲೇಮುದಾರರು ಪಡೆದಿದ್ದ 20 ಲಕ್ಷ ರೂ. ಗಳನ್ನು ಪರಿಹಾರ ಮೊತ್ತದಲ್ಲಿ ಕಡಿತಗೊಳಿಸಿದ ನ್ಯಾಯಾಧಿಕರಣದ ಆದೇಶವನ್ನು ಬದಿಗಿರಿಸಿದೆ. ಮೃತಪಟ್ಟ ವ್ಯಕ್ತಿಯ ಆದಾಯ ಮೊತ್ತವನ್ನು 6,98,522/– ರೂ. ಗಳೆಂದು ಪುನರ್ ನಿರ್ಧರಿಸಿ, ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರಧನವನ್ನು ಹೆಚ್ಚಿಸಿದ ಉಚ್ಚ ನ್ಯಾಯಾಲಯವು ಪರಿಹಾರಧನದ ಮೊತ್ತವನ್ನು 1,00,29,308/– ರೂ. ಗಳಿಗೆ ಹೆಚ್ಚಿಸಿ ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.

* ಎಂ.ಎಫ್.ಎ. ಸಂಖ್ಯೆ: 1332/2014 (ಎಂವಿ), ದಿನಾಂಕ: 4ನೇ ನವೆಂಬರ್, 2015

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. ಐಎಲ್ಆರ್ 2008 ಕೆಎಆರ್ 3277<br>ಶಾಹೀದ್ ಅಹ್ಮದ್ –ವಿರುದ್ಧ–<br>ಶಂಕರನಾರಾಯಣ ಭಟ್ ಹಾಗೂ ಮತ್ತೊಬ್ಬರು* | *(ಉಲ್ಲೇ) 5* |
| *2. (2013) 7 ಎಸ್‌ಸಿಸಿ 476 :<br>ಎಐಆರ್ 2013 ಎಸ್‌ಸಿಡಬ್ಲ್ಯೂ 3258<br>ವಿಮಲ್ ಕನ್ವರ್ ಹಾಗೂ ಇತರರು –ವಿರುದ್ಧ–<br>ಕಿಶೋರ್ ದನ್ ಮತ್ತು ಇತರರು* | *(ಉಲ್ಲೇ) 8* |
| *3. (1999) 1 ಎಸ್‌ಸಿಸಿ 90<br>ಹೆಲೆನ್ ಸಿ. ರೆಬೆಲ್ಲೊ (ಶ್ರೀಮತಿ)<br>ಮತ್ತು ಇತರರು –ವಿರುದ್ಧ– ಮಹಾರಾಷ್ಟ್ರ<br>ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಇನ್ನೊಬ್ಬರು* | *(ಉಲ್ಲೇ) 9* |
| *4. ಎಂ.ಎಫ್.ಎ. ಸಂ. 7737/2013, ದಿ: 25.6.2014<br>ಪದ್ಮಾವತಿ ಮತ್ತು ಇತರರು –ವಿರುದ್ಧ–<br>ಕೆ. ರವಿಚಂದ್ರನ್ ಮತ್ತು ಇನ್ನೊಬ್ಬರು* | *(ಉಲ್ಲೇ) 9* |

ಅರ್ಜಿದಾರರ ಪರ: ಶ್ರೀ ಆರ್. ವಿಜಯ ಕುಮಾರ್, ವಕೀಲರು;
2ನೇ ಪ್ರತ್ಯರ್ಜಿದಾರರ ಪರ: ಬಿ. ಪ್ರದೀಪ್, ವಕೀಲರು;
ದಿನಾಂಕ 12.08.2015 ರ ಆದೇಶದ ಪ್ರಕಾರ
ಪ್ರತಿವಾದಿ 1ಕ್ಕೆ ನೋಟೀಸನ್ನು ನೀಡಲಾಗಿದೆ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್**:

ಕ್ಲೇಮುದಾರರು, ಹೆಚ್ಚುವರಿ ಹಿರಿಯ ನ್ಯಾಯಾಧೀಶರು ಹಾಗೂ ಸದಸ್ಯರು, ಮೋಟಾರು ಅಪಘಾತ ನ್ಯಾಯಾಧಿಕರಣ, ಬೆಂಗಳೂರು (ಎಸ್‌ಸಿಸಿಎಚ್–18)

(ಇಲ್ಲಿ ಇನ್ನುಮುಂದೆ ಸಂಕ್ಷಿಪ್ತತೆಗಾಗಿ 'ನ್ಯಾಯಾಧಿಕರಣ' ಎಂದು ಉಲ್ಲೇಖಿಸಲಾಗಿದೆ) ಇವರ ಎಂ.ವಿ.ಸಿ ಸಂ.2553/2012 ರಲ್ಲಿ ಹೊರಡಿಸಿದ ದಿನಾಂಕ 6ನೇ ನವೆಂಬರ್‌ನ ಪ್ರಶ್ನಿತ ತೀರ್ಪು ಹಾಗೂ ಐತೀರ್ಪಿನ ವಿರುದ್ಧ ನಷ್ಟಪರಿಹಾರವನ್ನು ಹೆಚ್ಚಿಸಲು ಕೋರಿ ಈ ಅಪೀಲನ್ನು ಹೂಡಿರುತ್ತಾರೆ.

2. ನ್ಯಾಯಾಧಿಕರಣವು ತನ್ನ ತೀರ್ಪು ಹಾಗೂ ಐತೀರ್ಪಿನ ಮೂಲಕ ರಸ್ತೆ ಸಂಚಾರ ಅಪಘಾತದಲ್ಲಿ ಮೃತ–ಅಣ್ಣಪ್ಪ ಮಲ್ಲಪ್ಪ ಹಿಪ್ಪರಗಿಯವರು ಮೃತರಾದ ಕಾರಣದಿಂದ ಅರ್ಜಿ ಸಲ್ಲಿಸಿದ ದಿನಾಂಕದಿಂದ ನಗದಾಗಿ ಪರಿವರ್ತನೆಯಾಗುವವರೆಗೆ ಪ್ರತೀ ವರ್ಷ ಶೇಕಡಾ 8ರ ಬಡ್ಡಿ ದರದೊಂದಿಗೆ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ 87,37,145/– ರೂ.ಗಳ ನಷ್ಟಪರಿಹಾರವನ್ನು ನೀಡಿತ್ತು.

3. ಸಂಕ್ಷಿಪ್ತವಾಗಿ ಮೊಕದ್ದಮೆಯ ಸಂಗತಿಗಳು ಹೀಗಿವೆ:

1ನೇ ಅಪೀಲುದಾರಳು ಹೆಂಡತಿಯಾಗಿದ್ದಾಳೆ, 2ನೇ ಅಪೀಲುದಾರಳು ಅಪ್ರಾಪ್ತ ಮಗಳಾಗಿದ್ದಾಳೆ 3ನೇ ಹಾಗೂ 4ನೇ ಅಪೀಲುದಾರರು, ಮೃತ–ಅಣ್ಣಪ್ಪ ಮಲ್ಲಪ್ಪ ಹಿಪ್ಪರಗಿಯವರ ತಂದೆತಾಯಿಗಳಾಗಿದ್ದು ಅವರು, ಮೃತ–ಅಣ್ಣಪ್ಪ ಮಲ್ಲಪ್ಪ ಹಿಪ್ಪರಗಿಯವರು ರಸ್ತೆ ಸಂಚಾರ ಅಪಘಾತದಲ್ಲಿ ಅಕಾಲದಲ್ಲಿ ಮೃತರಾದ ಕಾರಣದಿಂದ ಪ್ರತಿವಾದಿಗಳ ವಿರುದ್ಧ 6,30,00,000/– ರೂ. ಗಳ ನಷ್ಟಪರಿಹಾರವನ್ನು ಕ್ಲೇಮು ಮಾಡಿ ಮೋಟಾರು ವಾಹನಗಳ ಅಧಿನಿಯಮದ 166 ನೇ ಪ್ರಕರಣದ ಮೇರೆಗೆ ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದರು. ದಿನಾಂಕ 21.02.2012 ರಂದು ಬೆಳಿಗ್ಗೆ ಸುಮಾರು 6.45 ರಲ್ಲಿ, ಬೆಂಗಳೂರಿನ ವರ್ತೂರು ಮುಖ್ಯರಸ್ತೆಯಲ್ಲಿ ಕೆಎ–04–ಇಎಲ್–6937 ರ ನೋಂದಣಿ ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲ್‌ನಲ್ಲಿ ಮೃತರು ಹೋಗುತ್ತಿದ್ದಾಗ, ನೋಂದಣಿ ಸಂ. ಕೆಎ–01–ಎಎ–9879 ರ ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಖಾಸಗಿ ಬಸ್‌ನ ಚಾಲಕನು, ಅತೀವೇಗವಾಗಿ ಮತ್ತು ಅಜಾಗರೂಕವಾಗಿ ಹಾಗೂ ಉದಾಸೀನ ರೀತಿಯಲ್ಲಿ ಬಂದು ಮೋಟಾರು ಸೈಕಲ್‌ನ ಹಿಂಭಾಗಕ್ಕೆ ಡಿಕ್ಕಿ

ಹೊಡೆದಿದ್ದಾನೆ. ಇದರ ಪರಿಣಾಮವಾಗಿ, ಮೃತನಿಗೆ ನೆಲಕ್ಕೆ ಬಿದ್ದು ತೀವ್ರತರವಾದ ಗಾಯಗಳಾಗಿವೆ ಮತ್ತು ಅದೇ ಕಾರಣದಿಂದ ಸಾವನ್ನಪ್ಪಿದ್ದಾನೆ.

4. ಮೃತನು ಸುಮಾರು 45 ವರ್ಷದವನಾಗಿದ್ದ ಮತ್ತು ಮಕಿನೊ ಇಂಡಿಯಾ ಪ್ರೈ. ಲಿಮಿಟೆಡ್‌ನಲ್ಲಿ ಸೆಕ್ಷನ್ ಮ್ಯಾನೇಜರ್ ಆಗಿ (ವಿಭಾಗ ವ್ಯವಸ್ಥಾಪಕರು) ಕಾರ್ಯನಿರ್ವಹಿಸುತ್ತಿದ್ದು. ಪ್ರತೀ ತಿಂಗಳು 90,924/– ರೂ. ಗಳಷ್ಟು ಒಟ್ಟು ಸಂಬಳವನ್ನು ಪಡೆಯುತ್ತಿದ್ದು ಕುಟುಂಬದ ಸೌಖ್ಯಕ್ಕಾಗಿ ಸಂಪೂರ್ಣ ಮೊತ್ತವನ್ನು ವ್ಯಯಿಸುತ್ತಿದ್ದರು ಎಂಬುದು ಅಪೀಲುದಾರರ ವಾದವಾಗಿದೆ. ಇವರು ಕುಟುಂಬದ ಒಬ್ಬರೇ ದುಡಿಮೆ ವ್ಯಕ್ತಿಯಾಗಿದ್ದು ಸಂಪೂರ್ಣ ಕುಟುಂಬ ಮೃತರ ಆದಾಯವನ್ನು ಅವಲಂಬಿಸಿದೆ. ಅಕಾಲದಲ್ಲಿ ಇವರು ಮೃತರಾದ ಕಾರಣದಿಂದ ಹೆಂಡತಿಯು ತನ್ನ ಬಾಳಸಂಗಾತಿಯನ್ನು ಕಳೆದುಕೊಂಡಿದ್ದಾಳೆ ಹಾಗೂ ಮಗಳು ಪಿತೃ–ವಾತ್ಸಲ್ಯವನ್ನು, ಮಾರ್ಗದರ್ಶನವನ್ನು, ಸ್ಫೂರ್ತಿಯನ್ನು ಜೀವನದಲ್ಲಿ ಭದ್ರತೆಯನ್ನು ಕಳೆದುಕೊಂಡಿದ್ದಾಳೆ. ಇವನ ತಂದೆತಾಯಿಗಳು ತಮ್ಮ ಮಗನ ಉಜ್ವಲ ಭವಿಷ್ಯವನ್ನು ನೋಡುವುದರಿಂದ ವಂಚಿತರಾಗಿದ್ದಾರೆ. ಇದರಿಂದ ಕುಟುಂಬದ ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಪರಿಣಾಮ ಉಂಟಾಗಿದೆ, ಆದ್ದರಿಂದ ಅವರು, ನಷ್ಟಪರಿಹಾರವನ್ನು ಕ್ಲೇಮು ಮಾಡಿ ಎದುರುದಾರರ ವಿರುದ್ಧ ಕ್ಲೇಮು ಅರ್ಜಿಯನ್ನು ಹಾಕಿದ್ದಾರೆ. ಸದರಿ ಕ್ಲೇಮು ಅರ್ಜಿಯು ನ್ಯಾಯಾಧಿಕರಣದ ಮುಂದೆ ಪರಿಗಣನೆಗಾಗಿ ಬಂದಿತ್ತು. ನ್ಯಾಯಾಧಿಕರಣವು ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಮತ್ತು ದಾಖಲೆಯಲ್ಲಿರುವ ಇತರ ಮಾಹಿತಿಯನ್ನು ಮೌಲ್ಯಮಾಪನ ಮಾಡಿದ ನಂತರ, ಭಾಗಶಃ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿ ಸಲ್ಲಿಸಿದ ದಿನಾಂಕದಿಂದ ನಗದಾಗುವವರೆಗೆ ಪ್ರತೀ ವರ್ಷ ಶೇ.8 ರ ದರದಲ್ಲಿ ಬೇರೆ ಬೇರೆ ಶೀರ್ಷಿಕೆಗಳ ಅಡಿಯಲ್ಲಿ 87,37,145/– ರೂ. ಗಳ ನಷ್ಟಪರಿಹಾರವನ್ನು ನೀಡಿರುತ್ತದೆ. ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಐತೀರ್ಪಿನಿಂದ ತೃಪ್ತಿಯಾಗದಿರುವ, ಅಪೀಲುದಾರರು, ಸಮೂಹ ಖಾಸಗಿ ಅಪಘಾತ ಕ್ಲೇಮು ವಿವಾದಕ್ಕೆ ಸಂಬಂಧಪಟ್ಟಂತೆ ಅಪೀಲುದಾರರು/ಕ್ಲೇಮುದಾರರು ಸ್ವೀಕರಿಸಿದ 20,00,000/– ರೂ. ಗಳನ್ನು ಕಳೆಯುವ ಮೂಲಕ ನ್ಯಾಯಾಧಿಕರಣವು ತಪ್ಪೆಸಗಿದೆಯೆನ್ನುವ

ಆಧಾರದ ಮೇಲೆ ಹಾಗೂ ನಷ್ಟಪರಿಹಾರವನ್ನು ಹಾಗೂ ಬಡ್ಡಿದರವನ್ನು ಹೆಚ್ಚಿಸಲೂ ಕೋರಿ ಈ ಅಪೀಲನ್ನು ಸಲ್ಲಿಸಿದ್ದಾರೆ.

5. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಆರ್. ವಿಜಯಕುಮಾರ್ ರವರ ನಿವೇದನೆ ಏನೆಂದರೆ, ಅವಲಂಬನೆಯ ನಷ್ಟ ಹಾಗೂ ಸಾಂಪ್ರದಾಯಿಕ ಶೀರ್ಷಿಕೆಗಳ ಸಂಬಂಧದಲ್ಲಿ ಯುಕ್ತ ನಷ್ಟಪರಿಹಾರವನ್ನು ನೀಡುವಲ್ಲಿ ನ್ಯಾಯಾಧಿಕರಣವು ತಪ್ಪೆಸಗಿದೆಯೆಂಬುದಾಗಿದೆ. ನೀಡಲಾದ ನಷ್ಟಪರಿಹಾರವು ಸಾಕಷ್ಟಿರುವುದಿಲ್ಲ ಹಾಗೂ ಇದನ್ನು ಹೆಚ್ಚಿಸಬೇಕು ಎಂಬುದಾಗಿ ನಿವೇದಿಸಿದ್ದಾರೆ.

ಅಲ್ಲದೆ, ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸಮೂಹ ಖಾಸಗಿ ಅಪಘಾತ ಕ್ಲೇಮು ಇತ್ಯರ್ಥ ಪ್ರಯೋಜನಕ್ಕೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ 20,00,000/- ರೂ. ಗಳ ಮೊತ್ತವನ್ನು ಕಳೆಯುವಲ್ಲಿ ತಪ್ಪೆಸಗಿದೆಯೆಂಬುದನ್ನು ತೋರಿಸುವಲ್ಲಿ ಮುಂದಾಗಿದ್ದಾರೆ. ಇವರು ತನ್ನ ನಿವೇದನೆಯನ್ನು ಸಮರ್ಥಿಸಲು, ***ಶಾಹೀದ್ ಅಹ್ಮದ್ –ವಿರುದ್ಧ– ಶಂಕರನಾರಾಯಣ ಭಟ್ ಹಾಗೂ ಮತ್ತೊಬ್ಬರು*** [1], ಪ್ರಕರಣದಲ್ಲಿ ವರದಿಯಾದ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ಇದರಲ್ಲಿ, ಇದು, ಸುಂದರಂ ವಿಮಾ ಕಂಪನಿಯಿಂದ ಮೆಡಿಕ್ಲೇಮ್ ವಿಮೆ ಪಾಲಿಸಿ ಅಡಿಯಲ್ಲಿ ಕ್ಲೇಮುದಾರರು ಕಳೆಯಲು ಕಾರಣವಾಗಬಹುದಾದ 'ಧನ ಸಹಾಯ' ವೆಂದು ಹೇಳಲಾಗುವ ಮೋಟಾರು ವಾಹನಗಳ ಅಧಿನಿಯಮದ ಪರಿಧಿಯೊಳಗೆ ಬರುವುದಿಲ್ಲವೆಂದು ಅಭಿಪ್ರಾಯ ಪಟ್ಟಿದೆ. ಕ್ಲೇಮುದಾರರು ಸ್ವೀಕರಿಸಿದ ಮೆಡಿಕ್ಲೇಮ್ ಮೊತ್ತವನ್ನು, ಕ್ಲೇಮುದಾರರಿಗೆ ಸಂದಾಯ ಮಾಡಬೇಕಾದ ಒಟ್ಟು ನಷ್ಟ ಪರಿಹಾರದಿಂದ ಕಳೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ, ವಿಮಾ ಕಂಪನಿಯು ಸಮೂಹ ಖಾಸಗಿ ಅಪಘಾತ ಕ್ಲೇಮು ಇತ್ಯರ್ಥದ ಮೇರೆಗೆ ಕ್ಲೇಮುದಾರರಿಗೆ ಸದರಿ ನಷ್ಟಪರಿಹಾರವನ್ನು

1. ಐಎಲ್ಆರ್ 2008 ಕೆಎಆರ್ 3277

ಸಂದಾಯ ಮಾಡಲು ಹೊಣೆಯಾಗಿರುತ್ತದೆ. ಅಲ್ಲದೆ, ಇವರು, ಮೃತರು ಪ್ರತೀ ತಿಂಗಳು 90,924/- ರೂ. ಗಳ ಒಟ್ಟು ವೇತನವನ್ನು ಪಡೆದುಕೊಳ್ಳುತ್ತಿದ್ದು ಇದರಲ್ಲಿ ಆದಾಯತೆರಿಗೆ ಹಾಗೂ ವೃತ್ತಿ ತೆರಿಗೆಯು ಅಂಗೀಕಾರಾರ್ಹ ಕಳೆತಗಳಾಗಿದ್ದವು ಎಂದು ನಿವೇದಿಸಿದ್ದಾರೆ. ಮೃತರಿಗೆ ಅಪಘಾತದ ಸಮಯದಲ್ಲಿ ಸುಮಾರು 45 ವರ್ಷ ವಯಸ್ಸಾಗಿತ್ತು. ಯುಕ್ತ ಗುಣಕವು '14' ಹಾಗೂ ವೈಯಕ್ತಿಕ ವೆಚ್ಚದ ಸಂಬಂಧದಲ್ಲಿ 1/4 ಭಾಗದಷ್ಟಿದ್ದು ಅದನ್ನು ಕಡಿತಗೊಳಿಸಬೇಕು. ಅಲ್ಲದೆ, ನ್ಯಾಯಾಧಿಕರಣವು, ದಾಂಪತ್ಯ ನಷ್ಟ, ಸಂಪದದ ನಷ್ಟ, ಪ್ರೀತಿ ವಾತ್ಸಲ್ಯ ನಷ್ಟ, ಸಾರಿಗೆ ಹಾಗೂ ಅಂತ್ಯಕ್ರಿಯೆ ವೆಚ್ಚಗಳಂಥ ಸಾಂಪ್ರದಾಯಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಯುಕ್ತ ನಷ್ಟಪರಿಹಾರವನ್ನು ನೀಡಿಲ್ಲವೆಂಬುದನ್ನು ತೋರಿಸಲು ಸಹ ಮುಂದಾಗಿದ್ದಾರೆ. ಇವರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಬೆಳಕಿನಲ್ಲಿ ಹಾಗೂ ಈ ನ್ಯಾಯಾಲಯದ ತೀರ್ಪುಗಳ ಸಮೂಹದಲ್ಲಿ ಕನಿಷ್ಠಪಕ್ಷ ಪ್ರತೀ ವರ್ಷ ಶೇಕಡಾ 9 ರಿಂದ 10 ರಷ್ಟು ಬಡ್ಡಿಯನ್ನು ನೀಡಬಹುದಾಗಿದೆಂದು ಸಹ ನಿವೇದಿಸಿದ್ದಾರೆ. ಆದ್ದರಿಂದ, ಇವರು ಪ್ರಶ್ನಿತ ತೀರ್ಪು ಹಾಗೂ ನ್ಯಾಯಾಧಿಕರಣವು ಹೊರಡಿಸಿದ ಐತೀರ್ಪನ್ನು ಮಾರ್ಪಾಟುಗೊಳಿಸುವ ಮೂಲಕ ನಷ್ಟಪರಿಹಾರ ಹಾಗೂ ಬಡ್ಡಿಯ ದರವನ್ನು ಹೆಚ್ಚಿಸಬೇಕೆಂದು ನಿವೇದಿಸಿದ್ದಾರೆ.

6. ಮತ್ತೊಂದು ಕಡೆಯಲ್ಲಿ ಎದುರುದಾರ ಸಂ.2 – ವಿಮಾದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಬಿ. ಪ್ರದೀಪ್‌ರವರು, ಇತರ ವಿಷಯಗಳ ಪ್ರಶ್ನಿತ ತೀರ್ಪು ಹಾಗೂ ನ್ಯಾಯಾಧಿಕರಣವು ಹೊರಡಿಸಿದ ಐತೀರ್ಪು ನ್ಯಾಯಯುತವಾಗಿದೆ ಹಾಗೂ ಮುಕ್ತವಾಗಿದೆಯೆಂದು ವಾದಿಸಿದ್ದಾರೆ ಹಾಗೂ ನಿವೇದಿಸಿದ್ದಾರೆ. ಮೌಖಿಕ ಹಾಗೂ ದಾಖಲೆಯಲ್ಲಿರುವ ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ ನ್ಯಾಯಾಧಿಕರಣವು, ಅವಲಂಬನೆಯ ನಷ್ಟಕ್ಕೆ ಸಂಬಂಧಿಸಿದಂತೆ ಯುಕ್ತ ನಷ್ಟಪರಿಹಾರ ನೀಡಿರುವುದು ನ್ಯಾಯಸಮ್ಮತವಾಗಿದೆ. ನ್ಯಾಯಾಧಿಕರಣವು, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನುಸರಿಸಿ ಸಮೂಹ ವೈಯಕ್ತಿಕ ಅಪಘಾತ ಕ್ಲೇಮು ಇತ್ಯರ್ಥ ಪ್ರಯೋಜನದ ಅಡಿಯಲ್ಲಿ ಕ್ಲೇಮುದಾರರು ಸ್ವೀಕರಿಸಿದ 20,00,000/- ರೂ. ಮೊತ್ತವನ್ನು ಕಡಿತಗೊಳಿಸುವುದನ್ನು ಸಹ

ಸಮರ್ಥಿಸಿಕೊಂಡಿದ್ದಾರೆ. ಆದ್ದರಿಂದ, ಇವರು, ಈ ನ್ಯಾಯಾಲಯವು ಹಸ್ತಕ್ಷೇಪ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ನಿವೇದಿಸಿದ್ದಾರೆ. ಆದಾಗ್ಯು, ಇವರು, ಸಾಂಪ್ರದಾಯಿಕ ಶೀರ್ಷಿಕೆಗಳ ಮೇರೆಗೆ ನೀಡಲಾದ ನಷ್ಟಪರಿಹಾರದ ಪ್ರಮಾಣ ಕಡಿಮೆಯಾಗಿದೆಯೆಂದು ಮತ್ತು ಅದನ್ನು ಕಾನೂನಿಗನುಸಾರವಾಗಿ ಪರಿಗಣಿಸಬಹುದೆಂದು ನಿರ್ದಿಷ್ಟವಾಗಿ ನಿವೇದಿಸಿದ್ದಾರೆ.

7. ಪ್ರಶ್ನಿತ ತೀರ್ಪು ಹಾಗೂ ನ್ಯಾಯಾಧಿಕರಣವು ಹೊರಡಿಸಿದ ಐತೀರ್ಪನ್ನು ಒಳಗೊಂಡಂತೆ, ಎರಡೂ ಕಡೆಯ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ನಿವೇದನೆಗಳನ್ನು ಪರಿಗಣಿಸಿದ ನಂತರ ಹಾಗೂ ದಾಖಲೆಯಲ್ಲಿರುವ ಮಾಹಿತಿಯನ್ನು ಅವಲೋಕಿಸಿದ ಮೇಲೆ ಈ ಅಪೀಲಿನಲ್ಲಿ ನಮ್ಮ ಪರಿಗಣನೆಗಾಗಿ ಈ ಅಂಶಗಳು ಉದ್ಭವಿಸುತ್ತವೆ:

1) ಸಮೂಹ ವೈಯಕ್ತಿಕ ಅಪಘಾತ ಕ್ಲೇಮು ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ 20.00 ಲಕ್ಷ ರೂ. ಮೊತ್ತವನ್ನು ಕಡಿತಗೊಳಿಸಿರುವ ನ್ಯಾಯಾಧಿಕರಣದ ನಿಲುವು ಸಮರ್ಥನೀಯವಾಗಿದೆಯೇ?

2) ನ್ಯಾಯಾಧಿಕರಣವು ನೀಡಿದ ನಷ್ಟಪರಿಹಾರದ ಪ್ರಮಾಣವು ನ್ಯಾಯಯುತವಾಗಿದೆಯೇ ಮತ್ತು ಯುಕ್ತವಾಗಿದೆಯೇ?

ಮರು–ಪರಿಶೀಲನಾಂಶ ಸಂ.1): ಅಪಘಾತ ಸಂಭವಿಸಿದುದರ ಪರಿಣಾಮ ಮೃತರು ಮೃತರಾಗಿರುವುದರಲ್ಲಿ ಯಾವುದೇ ವಿವಾದವಿಲ್ಲ.

ಸಮೂಹ ಖಾಸಗಿ ಅಪಘಾತ ಕ್ಲೇಮು ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ 20.00 ಲಕ್ಷ ರೂ. ಮೊತ್ತವನ್ನು ಕಡಿತಗೊಳಿಸುವುದನ್ನು

ನ್ಯಾಯಾಧಿಕರಣವು ಸಮರ್ಥನೀಯವಲ್ಲವೆಂಬುದು ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ನಿರ್ದಿಷ್ಟ ನಿವೇದನೆಯಾಗಿದೆ. ಸದರಿ ನಿವೇದನೆಯನ್ನು ಸಮರ್ಥಿಸುವಲ್ಲಿ ಅವರು, ಎಂಎಫ್‌ಎ ಸಂ.3688/2007 ರಲ್ಲಿ ದಿನಾಂಕ 1ನೇ ಏಪ್ರಿಲ್ 2008ರ ಮಾನ್ಯ ಏಕಪೀಠ ನ್ಯಾಯಾಧೀಶರ ನಿರ್ಣಯವನ್ನು ಅವಲಂಬಿಸಿದ್ದು, ಇದರಲ್ಲಿ, ಸುಂದರಂ ವಿಮಾ ಕಂಪೆನಿಯಿಂದ ಮೆಡಿಕ್ಲೇಮ್ ಪಾಲಿಸಿಯ ಅಡಿಯಲ್ಲಿ ಇಲ್ಲಿ ಕ್ಲೇಮುದಾರನು ಸ್ವೀಕರಿಸಿದ ಮೊತ್ತವು, ಕಳೆತಕ್ಕೆ ಕಾರಣವಾಗುವ 'ಧನ ಅನುಕೂಲ' ವೆಂದು ಕರೆದಿರುವ ಮೋಟಾರು ವಾಹನಗಳ ಪರಿಧಿಯೊಳಗೆ ಬರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ. ಈ ವಿಷಯದಲ್ಲಿ ಸುಂದರಂ ವಿಮಾ ಕಂಪೆನಿಯಿಂದ ಕ್ಲೇಮುದಾರ ಸ್ವೀಕರಿಸಿದ ಮೆಡಿಕ್ಲೇಮು ಮೊತ್ತವನ್ನು, ಕ್ಲೇಮುದಾರನಿಗೆ ಸಂದಾಯ ಮಾಡಬೇಕಾದ ಒಟ್ಟು ನಷ್ಟಪರಿಹಾರದಿಂದ ಕಳೆತ ಮಾಡಲು ಸಾಧ್ಯವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು, ನಷ್ಟಪರಿಹಾರದ ಒಟ್ಟು ಮೊತ್ತದಿಂದ ಕ್ಲೇಮುದಾರನಿಗೆ ಸಂದಾಯವಾದ 1,22,000/- ರೂ. ಗಳನ್ನು (ಮೆಡಿಕ್ಲೇಮು ವಿಮಾ ಮೊತ್ತ) ಕಡಿತಗೊಳಿಸಿರುವುದು ಒಪ್ಪುವಂಥದ್ದಲ್ಲ. ಆದ್ದರಿಂದ ಎದುರುದಾರ ಸಂ.2 / ವಿಮಾದಾರ ಕಂಪೆನಿಯು, ಕ್ಲೇಮುದಾರನು ವ್ಯಯಮಾಡಿದ ವೈದ್ಯಕೀಯ ವೆಚ್ಚವನ್ನು ಸಂದಾಯ ಮಾಡಲು ಹೊಣೆಯಾಗಿರುತ್ತದೆ.

8. ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪನ್ನು ಒಳಗೊಂಡಂತೆ ಕಡತದಲ್ಲಿರುವ ಸಂಪೂರ್ಣ ಮಾಹಿತಿಯ ವಿಮರ್ಶಾತ್ಮಕ ಮೌಲ್ಯಮಾಪನ ಮಾಡಿದ ನಂತರ, ***ವಿಮಲ್ ಕನ್ವರ್ ಹಾಗೂ ಇತರರು -ವಿರುದ್ಧ- ಕಿಶೋರ್ ದನ್ ಮತ್ತು ಇತರರು***[1]**,** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ನ್ಯಾಯಾಧಿಕರಣವು ಅವಲಂಬಿಸಿದ್ದರೂ ಸಹ 22ನೇ ಕಂಡಿಕೆ, 13 ಮತ್ತು 14ನೇ ಒಳಪುಟದಲ್ಲಿ ಸಮೂಹ ಖಾಸಗಿ ಅಪಘಾತ ಕ್ಲೇಮು ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ 20,00,000/- ರೂ.ಗಳ ಮೊತ್ತವನ್ನು ಕಡಿತಗೊಳಿಸುವುದರಲ್ಲಿ ತಪ್ಪನ್ನು ಮಾಡಿದ್ದು, ಇದು ಒಪ್ಪುವಂಥದ್ದಲ್ಲವೆಂಬುದು ಕಂಡುಬರುತ್ತದೆ.

1. (2013) 7 ಎಸ್‌ಸಿಸಿ 476 : ಎಐಆರ್ 2013 ಎಸ್‌ಸಿಡಬ್ಲ್ಯೂ 3258

9. ***ವಿಮಲ್ ಕನ್ವರ್***ರ ಪ್ರಕರಣದಲ್ಲಿ (ಮೇಲಿನ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲೋಕಿಸಿದ ನಂತರ, ಕಂಡಿಕೆ 19ನ್ನು ಉದ್ಧೃತಗೊಳಿಸುವುದು ತಕ್ಕುದಾದುದಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

> *19. ಈ ಮೇಲೆ ಹೇಳಲಾದ ವಿವಾದವು ಈ ನ್ಯಾಯಾಲಯದ ಮುಂದೆ,* ***ಹೆಲೆನ್ ಸಿ. ರೆಬೆಲೋ –ವಿರುದ್ಧ– ಮಹಾರಾಷ್ಟ್ರ ಎಸ್.ಆರ್.ಟಿ.ಸಿ*** *ಮೊಕದ್ದಮೆಯು ಈ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಬಂದಿತ್ತು. ಸದರಿ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಭವಿಷ್ಯನಿಧಿ, ನಿವೃತ್ತಿವೇತನ, ವಿಮೆ ಹಾಗೂ ಸದೃಶವಾಗಿ, ಯಾವುದೇ ನಗದು, ಬ್ಯಾಂಕು ಶಿಲ್ಕು, ಷೇರುಗಳು, ನಿಶ್ಚಿತ ಠೇವಣಿಗಳು ಮುಂತಾದವುಗಳು, ಒಬ್ಬರ ಮರಣದ ಕಾರಣದಿಂದ ವಾರಸುದಾರರು ಸ್ವೀಕರಿಸಬಹುದಾದ ಎಲ್ಲವೂ 'ಧನಾನುಕೂಲ' ವ್ಯವಸ್ಥೆಗಳಾಗಿವೆ, ಆದರೆ ಇವುಗಳೆಲ್ಲವೂ, ಅಪಘಾತದಿಂದಾದ ಮರಣದಿಂದ ಶಾಸನಬದ್ಧ ಸಂದರ್ಭಗಳ ಅಡಿಯಲ್ಲಿ ಮಾತ್ರ ಸ್ವೀಕರಿಸಬಹುದಾದ ಮೊತ್ತದೊಂದಿಗೆ ಸಂಬಂಧ ಹೊಂದಿರುವುದಿಲ್ಲ. ಅಂಥ ಮೊತ್ತವು, ಕಡಿತಗೊಳಿಸಲು ಕಾರಣವಾಗಬಹುದಾದ 'ಧನಾನುಕೂಲ' ವೆಂದು ಕರೆಯಲಾಗುವ ಮೋಟಾರು ವಾಹನಗಳ ಅಧಿನಿಯಮದ ಪರಿಧಿಯೊಳಗೆ ಬರುವುದಿಲ್ಲ. ಈ ಮುಂದಿನದನ್ನು ಈ ನ್ಯಾಯಾಲಯ ಗಮನಿಸಿತ್ತು ಹಾಗೂ ತೀರ್ಮಾನಕ್ಕೆ ಬಂದಿತ್ತು: (ಎಸ್‌ಸಿಪಿಪಿ 111–12, ಕಂಡಿಕೆ 35)*
>
> *35. ಭವಿಷ್ಯ ನಿಧಿಯನ್ನು ಸ್ವೀಕರಿಸಿದ್ದು ಅದು, ಅವನ ಸೇವಾವಧಿಯ ಅವಧಿಯಲ್ಲಿ ನೌಕರನು ಮಾಡಿದ ಸೇವೆಗಿಂತ*

ವಿಭಿನ್ನವಾದ ಸಂದಾಯವಾಗಿದೆಯೆಂಬುದನ್ನು ಸ್ಥೂಲವಾಗಿ ನಾವು ಪರಿಶೀಲಿಸಬಹುದು. ಅಂಥ ನೌಕರ ಅಥವಾ ಅವನ ವಾರಸುದಾರರು, ಅಪಘಾತದ ಮರಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಈ ಮೊತ್ತವನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುತ್ತಾರೆ. ಈ ಮೊತ್ತವು ಭದ್ರತಾ ಹಣವಾಗಿದ್ದು, ಮೋಟಾರು ವಾಹನಗಳ ಅಧಿನಿಯಮಗಳ ಮೇರೆಗೆ ಮೊತ್ತವನ್ನು ಸ್ವೀಕರಿಸುವುದು ನಿಶ್ಚಿತವಾಗಿರುತ್ತದೆ. ಅನಿಶ್ಚಿತವಾಗಿದ್ದಾಗ ಹಾಗೂ ಇದನ್ನು ಅಪಘಾತ ಮುಂತಾದಂಥ ಘಟನೆ ಸಂಭವಿಸಿದಾಗ ಮಾತ್ರ ಸ್ವೀಕರಿಸಬಹುದಾಗಿದ್ದು ಬೇರೆ ಸಂದರ್ಭಗಳಲ್ಲಿ ಸ್ವೀಕರಿಸಲಾಗುವುದಿಲ್ಲ. ಸದೃಶವಾಗಿ, ಕುಟುಂಬ ವೇತನವನ್ನು ಅವನ ಮರಣದ ನಂತರ ವಾರಸುದಾರರು ಪಡೆಯಬಹುದಾಗಿದ್ದು ಸೇವಾ ಷರತ್ತುಗಳ ಪರಿಭಾಷೆಯಲ್ಲಿ ಅವರು ಸಲ್ಲಿಸಿದ ಸೇವೆಯಲ್ಲಿ ವಂತಿಗೆ ರೀತಿಯಲ್ಲಿ ಅವನ ಕುಟುಂಬದ ಪ್ರಯೋಜನಕ್ಕೆ ನೌಕರನು ಗಳಿಸಿಕೊಳ್ಳುವನು. ವಾರಸುದಾರರು, ಅಪಘಾತದ ಮರಣವಲ್ಲದೆ ಇದ್ದರೂ ಸಹ ಕುಟುಂಬ ಪಿಂಚಣಿಯನ್ನು ಸ್ವೀಕರಿಸುವರು. ಇವೆರಡರ ನಡುವೆ ಯಾವುದೇ ಸಂಬಂಧವಿರುವುದಿಲ್ಲ. ಸದೃಶವಾಗಿ, ಜೀವ ವಿಮಾ ಪಾಲಿಸಿಯನ್ನು, ವಿಮೆಮಾಡಿದವರಾಗಲಿ ಅಥವಾ ವಿಮೆ ಮಾಡಿದವರೊಂದಿಗಿನ ಕರಾರಿನ ಸಲುವಾಗಿ ವಿಮೆ ಮಾಡಿದ ಹಕ್ಕುದಾರರಾಗಲಿ ಸ್ವೀಕರಿಸಬಹುದು, ಇದಕ್ಕಾಗಿ ವಿಮೆ ಮಾಡಿದವರು ಕಂತು ರೀತಿಯಲ್ಲಿ ನೀಡಿರುವರು. ವಿಮೆ ಮಾಡಿದವರು ಎಲ್ಲಾ ಕಂತುಗಳನ್ನು ಸಂದಾಯ ಮಾಡಿದ ನಂತರ ಕಂತು ಪರಿಪಕ್ವವಾಗುವವರೆಗೆ ಅವನು ಬದುಕಿದ್ದರೂ ಸಹ ಅವನು ಅದನ್ನು ಸ್ವೀಕರಿಸಬಹುದು. ಮರಣ ಹೊಂದಿದ ಸಂದರ್ಭದಲ್ಲಿ,

*ವಿಮಾದಾರನು, ಮತ್ತೆ ಸಂದಾಯಮಾಡಿದ ಕಂತುಗಳಿಗೆ ಸಂಬಂಧಿಸಿದ ಕರಾರಿನ ಪರಿಭಾಷೆಯಲ್ಲಿ ಹಕ್ಕುದಾರರಿಗೆ ಮೊತ್ತವನ್ನು ತುಂಬಿಕೊಡಲಾಗುತ್ತದೆ. ಪುನಃ ಯಾವುದೇ ಅಪಘಾತದ ಮರಣದ ಕಾರಣದಿಂದಲ್ಲದ ಆದರೆ ವಿಮಾದಾರನು ಮರಣ ಹೊಂದಿದರೆ ಕ್ಲೇಮುದಾರನು ಈ ಮೊತ್ತವನ್ನು ಸ್ವೀಕರಿಸಬಹುದು. ಮರಣವು ಮೊತ್ತವನ್ನು ಸ್ವೀಕರಿಸಲು ಕರಾರಿನ ನಿಬಂಧನೆಗಳಲ್ಲಿನ ಒಂದು ಹಂತ ಅಥವಾ ಆಕಸ್ಮಿಕ ಘಟನೆ ಅಷ್ಟೇ, ಸದೃಶವಾಗಿ ಯಾವುದೇ ನಗದು, ಬ್ಯಾಂಕು ಶಿಲ್ಕು, ಷೇರುಗಳು, ನಿಶ್ಚಿತ ಠೇವಣಿಗಳು ಮುಂತಾದವುಗಳೆಲ್ಲವು, ಒಬ್ಬರ ಮರಣದ ಕಾರಣದಿಂದ ಹಕ್ಕುದಾರರು ಸ್ವೀಕರಿಸಬಹುದಾದ ಧನರೂಪದ ಅನುಕೂಲಗಳು ಆದರೆ ಇವೆಲ್ಲವು ಅಪಘಾತದ ಮರಣದ ಕಾರಣದ ಮಾತ್ರದಿಂದಲೇ ಶಾಸನಬದ್ಧ ಅವಕಾಶದ ಅಡಿಯಲ್ಲಿ ಸ್ವೀಕರಿಸಬಹುದಾದ ಮೊತ್ತದೊಂದಿಗೆ ಸಂಬಂಧವನ್ನು ಹೊಂದಿರುವುದಿಲ್ಲ. ಅಂಥ ಮೊತ್ತವು, ಕಡಿತಕ್ಕೆ ಕಾರಣವಾಗುವ 'ಧನಾನುಕೂಲ' ವೆಂದು ಕರೆಯಲ್ಪಡುವ ಮೋಟಾರು ವಾಹನಗಳ ಅಧಿನಿಯಮದ ಧನಾನುಕೂಲದ ಮಿತಿಯೊಳಗೆ ಹೇಗೆ ಬರುತ್ತದೆ? ನಾವು, ನಷ್ಟ ಹಾಗೂ ಲಾಭದ ತತ್ವವನ್ನು ಕೋರಿದಾಗ, ಇದನ್ನು ಸದೃಶಗೊಳಿಸಬೇಕಾಗುತ್ತದೆ ಹಾಗೂ ಅದೇ ಸಮತಲವು, ಪರಸ್ಪರ ತಮ್ಮೊಳಗೆ ಸಂಬಂಧ ಹೊಂದಿರುತ್ತವೆ ಹಾಗೂ ಅವುಗಳಿಗೆ ಯಾವುದೇ ರೀತಿಯ ಸಂಬಂಧದ ಹೋಲಿಕೆಯಿರುವುದಿಲ್ಲ. ವಿಮಾದಾರನು (ಮೃತನು) ಸ್ವೀಕರಿಸುವುದಕ್ಕಾಗಿ ತನ್ನ ಸ್ವಂತ ಹಣವನ್ನು ಕಟ್ಟಿದ್ದು, ಅಪಘಾತದ ಕಾರಣದಿಂದ ಇವನ ಉದಾಸೀನತೆಯ*

> *ಸಂಬಂಧ ಖಾಸಗಿ ತಕ್ಷೀರುಗಾರನ ವಿರುದ್ಧವಾಗಿ ಲೆಕ್ಕಹಾಕಲಾದ ನಷ್ಟಪರಿಹಾರಕ್ಕೆ ಇದು ಸಂಬಂಧಿಸುವುದಿಲ್ಲ. ಹಿಂದೆ ಹೇಳಲಾದ ಹಾಗೆ, ಯಾವುದೇ ಹಾನಿ ಅಥವಾ ಮರಣದ ಕಾರಣದಿಂದ ಅದಕ್ಕೆ ಸಂಬಂಧಿಸಿದ ಯಾವುದೇ ಹಣ ನೀಡದೆ ಇದ್ದಾಗ ಅಧಿನಿಯಮದ ಮೇರೆಗೆ ನಷ್ಟಪರಿಹಾರವೆಂದು ಮೊತ್ತವನ್ನು ಸ್ವೀಕರಿಸಬಹುದು, ಆಗ ವಿಮಾದಾರನ ವಂತಿಗೆ ಮೂಲಕ ಸ್ವೀಕರಿಸಲಾದ ಮೊತ್ತದ ಫಲವನ್ನು ಹೇಗೆ ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸ್ವೀಕರಿಸಬಹುದಾದ ಮೊತ್ತದಿಂದ ಕಳೆಯಲಾಗುತ್ತದೆ. ಈ ಅಧಿನಿಯಮದ ಮೇರೆಗಿನ ಮೊತ್ತವನ್ನು ಯಾವುದೇ ವಂತಿಗೆಯಿಲ್ಲದೆ ಅವನು ಪಡೆಯುವನು. ನಾವು ಹೇಳಿದ ಹಾಗೆ, ಜೀವ ವಿಮಾ ಪಾಲಿಸಿಯ ಮೇರೆಗೆ ಸ್ವೀಕರಿಸಬಹುದಾದ ಮೊತ್ತವು ಕರಾರುಬದ್ಧವಾಗಿರುವಾಗ ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟಪರಿಹಾರವು ಶಾಸನಬದ್ಧವಾದುದಾಗಿರುತ್ತದೆ.*
>
> *(ಒತ್ತು ನೀಡಲಾಗಿದೆ)*

***ಹೆಲೆನ್ ಸಿ. ರೆಬೆಲ್ಲೊ (ಶ್ರೀಮತಿ) ಹಾಗೂ ಮತ್ತೊಬ್ಬರು –ವಿರುದ್ಧ– ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಇನ್ನೊಬ್ಬರು*** [3], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಕೆಲವು ತೀರ್ಪುಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಮೃತರ ಜೀವವಿಮೆಯನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಲೆಕ್ಕಹಾಕಲಾದ ನಷ್ಟಪರಿಹಾರವನ್ನು ಕಡಿತಗೊಳಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಸದರಿ ತೀರ್ಪಿನ ಕಂಡಿಕೆ 37 ನ್ನು ಹೀಗೆ ಓದಲಾಗಿದೆ:

3. (1999) 1 ಎಸ್‌ಸಿಸಿ 90

> "37. ತದನುಸಾರವಾಗಿ, ದಿನಾಂಕ 09.09.1985ರ ಪ್ರಶ್ನಿತ ತೀರ್ಪನ್ನು ತಳ್ಳಿಹಾಕಲಾಗಿದೆ ಹಾಗೂ ದಿನಾಂಕ 29.09.1980ರ ನ್ಯಾಯಾಧಿಕರಣದ ತೀರ್ಪನ್ನು ಪುನಃಸ್ಥಾಪಿಸಲಾಗಿದೆ ಹಾಗೂ ಮೃತರ ಜೀವವಿಮೆಯಿಂದ ಕ್ಲೇಮುದಾರನು ಸ್ವೀಕರಿಸಿದ ಮೊತ್ತವನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಲೆಕ್ಕಹಾಕಲಾದ ನಷ್ಟಪರಿಹಾರದಿಂದ ಕಡಿತಗೊಳಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ. ಸಂಬಂಧಪಟ್ಟ ಎದುರುದಾರನು, ಅದರ ಸಂಬಂಧದಲ್ಲಿ ಈಗಾಗಲೇ ನೀಡಿರದಿದ್ದರೆ, ತದನುಸಾರವಾಗಿ ಮೊತ್ತವನ್ನು ಸಂದಾಯ ಮಾಡತಕ್ಕದ್ದು."
>
> (ಒತ್ತು ನೀಡಲಾಗಿದೆ)

ಆದ್ದರಿಂದ, ಮೇಲೆ ಹೇಳಲಾದ ಎರಡು ತೀರ್ಪುಗಳ ಬೆಳಕಿನಲ್ಲಿ, ಗಾಯಾಳುವಿನ ಮರಣದ ಕಾರಣದಿಂದ ಭವಿಷ್ಯ ನಿಧಿ, ಪಿಂಚಣಿ ಹಾಗೂ ಜೀವ ವಿಮೆಗೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ ಯಾವುದೇ ಮೊತ್ತವನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಲೆಕ್ಕಹಾಕಲಾದ ನಷ್ಟಪರಿಹಾರದಿಂದ ಕಡಿತಗೊಳಿಸಲು ಬಾಧ್ಯವಾಗುವುದಿಲ್ಲವೆಂಬುದು ಸುಸ್ಪಷ್ಟವಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಸಾಮೂಹಿಕ ಖಾಸಗಿ ಅಪಘಾತ ಕ್ಲೇಮು ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕ್ಲೇಮುದಾರರು ಸ್ವೀಕರಿಸಿದ 20.00 ಲಕ್ಷ ರೂ. ಗಳ ಮೊತ್ತವಾಗಿದ್ದು, ಇದಕ್ಕೆ ಒಪ್ಪಿಕೊಳ್ಳಲಾದ ಹಾಗೆ, ಮೃತರ ಉದ್ಯೋಗದಾತನು ಕಂತನ್ನು ಪಾವತಿಸಿರುತ್ತಾನೆ.

ವಾಸ್ತವವಾಗಿ, ಈ ಮೊದಲು, ಈ ನ್ಯಾಯಾಲಯದ ವಿಭಾಗೀಯ ಪೀಠವು ***ಪದ್ಮಾವತಿ ಮತ್ತು ಇತರರು –ವಿರುದ್ಧ– ಕೆ. ರವಿಚಂದ್ರನ್ ಮತ್ತು ಇನ್ನೊಬ್ಬರು*** [4] ಪ್ರಕರಣವನ್ನು ವಿಲೆ ಮಾಡಿದ್ದು, ಉದ್ಯೋಗದಾತನಿಂದ ಮೃತರ ವಿಧವೆಯು

4. ಎಂ.ಎಫ್.ಎ. ಸಂ.7737/2013, ದಿನಾಂಕ 25.06.2014

ಮೃತರ ಚಿಕ್ಕ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಭರಿಸಲು ಸ್ವೀಕರಿಸಿದ 4.00 ಲಕ್ಷ ರೂ. ಗಳ ಮೊತ್ತವನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟಪರಿಹಾರದಿಂದ ಕಡಿತಗೊಳಿಸದೆ ಇದ್ದು, ಅಂಥ ಕಡಿತವು ಅನುಮತೀಯವಲ್ಲವೆಂಬ ಸದೃಶ ಭಾವನೆಯನ್ನು ತಳೆಯಲಾಗಿದ್ದು, ಇದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಿಂದೆ ಹೇಳಲಾದ ಎರಡು ತೀರ್ಪುಗಳನ್ನು ಆಧರಿಸಿದೆ. ಸದರಿ ವರದಿ ಮಾಡಲಾದ ವಿಭಾಗೀಯ ಪೀಠದ 14ನೇ ಕಂಡಿಕೆಯನ್ನು ಹೀಗೆ ಓದಲಾಗಿದೆ:

> 14. ಹಿಂದೆ ಹೇಳಲಾದ ಕಂಡಿಕೆಯನ್ನು ಎಚ್ಚರಿಕೆಯಿಂದ ಅವಲೋಕಿಸಿದ ನಂತರ, ಪ್ರಸ್ತುತ ನಮ್ಮ ಮುಂದಿರುವ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳಿಗೆ ಸದರಿ ಎರಡು ತೀರ್ಪುಗಳನ್ನು ಅನ್ವಯಿಸಬಹುದಾಗಿದೆಯೆಂಬುದನ್ನು ಯುಕ್ತವಾಗಿ ನೋಡಬಹುದು. ಪ್ರಸ್ತುತ ಪ್ರಕರಣದಲ್ಲಿ ಮೃತನು, ವಾಹನದ ಆಪರಾಧಿಕ ಚಾಲಕನ ಅತ್ಯಾತುರ ಹಾಗೂ ಅಜಾಗರೂಕತೆ ಕಾರಣದಿಂದ ಅಪಘಾತದ ಗಾಯಗಳಾಗಿ ಮೃತನಾಗಿದ್ದಾನೆ. ಸುಮಾರು 26 ವರ್ಷ ವಯಸ್ಸಿನ ಮೃತರ ಪತ್ನಿಗೆ ಉದ್ಯೋಗದಾತ ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ನೀಡಲಾಗಿದೆ ಮತ್ತು ಅದರ ಜೊತೆಗೆ, ಸಂಸ್ಥೆ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿ, ಮೃತರ ಮರಣದ ಸಮಯದಲ್ಲಿ ಸುಮಾರು 9 ಹಾಗೂ 8 ವರ್ಷ ವಯಸ್ಸಿನ ಅಪ್ರಾಪ್ತ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಭರಿಸಲು 4,00,000/- ರೂ. ಮೊತ್ತವನ್ನು ಉದ್ಯೋಗದಾತನು ನೀಡಿದ್ದಾನೆ. ಹಠಾತ್ ಹಾಗೂ ಅನಿರೀಕ್ಷಿತ ಹಣಕಾಸಿನ ಬಿಕ್ಕಟ್ಟನ್ನು ನಿವಾರಿಸಲು ಹಾಗೂ ಕುಟುಂಬವನ್ನು ವಿಪತ್ತಿನಿಂದ ಸಂರಕ್ಷಿಸಲು ಹಾಗೂ ಕುಟುಂಬವು ಗೌರವಾದರಗಳಿಂದ ಬದುಕಬೇಕೆಂಬುದನ್ನು

> ನೋಡಲೂ ಸಹ ಈ ಎರಡೂ ಪ್ರಯೋಜನಗಳನ್ನು ಉದ್ಯೋಗದಾತನು ನೀಡಿದ್ದಾನೆ. ಇದನ್ನು ತನ್ನ ಉದ್ಯೋಗಿಯ ಹಠಾತ್ ಮರಣವನ್ನಾಧರಿಸಿ ಹಾಗೂ ಮೃತರ ಕುಟುಂಬದ ಮೇಲಿನ ಕಾಳಜಿಗಾಗಿ ಉದ್ಯೋಗದಾತನು ಕೃಪಾಕಟಾಕ್ಷದ ಮೊತ್ತವನ್ನು ಉದ್ಯೋಗದಾತನು ನೀಡಿರುವನು ಹಾಗೂ ವಿಮಾದಾರನು ಇದರ ಅಡಿಯಲ್ಲಿ ಬರುವ ಯಾವುದೇ ಆಶ್ರಯವನ್ನು ಕಸಿದುಕೊಳ್ಳಲಾಗುವುದಿಲ್ಲ ಅಥವಾ ಅದರ ಪ್ರಯೋಜನವನ್ನು ಪಡೆದುಕೊಳ್ಳಲಾಗುವುದಿಲ್ಲ. ನಷ್ಟಭರ್ತಿಯನ್ನು ತುಂಬುವ ಇದರ ಜವಾಬ್ದಾರಿಯು ಹಾಗೆ ಉಳಿದುಕೊಳ್ಳುತ್ತದೆ ಹಾಗೂ ಇದು ಬದಲಾಗುವುದಿಲ್ಲ.
> (ಒತ್ತು ನೀಡಲಾಗಿದೆ)

10. ಆದ್ದರಿಂದ, ಮೃತರ ವಿಮೆದಾರ ಅಥವಾ ಉದ್ಯೋಗದಾತನು ನೀಡಿದ ವಂತಿಗೆಗಳು/ಕಂತುಗಳ ಮೂಲಕ ಸ್ವೀಕರಿಸಿದ ಮೊತ್ತದ ಫಲಗಳನ್ನು, ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸ್ವೀಕರಿಸಬಹುದಾದ ಮೊತ್ತದಿಂದ ಕಡಿತಗೊಳಿಸಲು ಸಾಧ್ಯವಿಲ್ಲವೆಂಬುದನ್ನು ಸಾಕಷ್ಟು ಸ್ಪಷ್ಟಗೊಳಿಸುತ್ತದೆ. ಆದ್ದರಿಂದ ನಾವು ಪರಿಶೀಲನಾಂಶ ಸಂ.1] ಕ್ಕೆ 'ನಕಾರಾತ್ಮಕ'ವಾಗಿ ಉತ್ತರಿಸಿರುತ್ತೇವೆ. ನ್ಯಾಯಾಧಿಕರಣವು, ಸಮೂಹ ಖಾಸಗಿ ಅಪಘಾತ ಕ್ಲೇಮು ಪ್ರಯೋಜನದ ಸಂಬಂಧದಲ್ಲಿ ಕ್ಲೇಮುದಾರರು ಸ್ವೀಕರಿಸಿದ 20.00 ಲಕ್ಷ ರೂ. ಗಳ ಮೊತ್ತವನ್ನು ಕಡಿತಗೊಳಿಸುವುದನ್ನು ಸಮರ್ಥಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟು ಇದನ್ನು ತಳ್ಳಿಹಾಕಲಾಗಿದೆ. ಹಾಗಾಗಿ ನಾವು, ಕ್ಲೇಮುದಾರರು, ಸದರಿ 20.00 ಲಕ್ಷ ರೂ. ಮೊತ್ತಕ್ಕೆ ಹಕ್ಕುಳ್ಳವರಾಗಿರುವರು.

ಮರು–ಪರಿಶೀಲನಾಂಶ ಸಂ.2] : ಅಪಘಾತವು 21.02.2012 ರಂದು ಬೆಳಿಗ್ಗೆ ಸುಮಾರು 6:45 ರಲ್ಲಿ ನಡೆದಿದ್ದು ಹಾಗೂ ಈ ಕಾರಣದಿಂದ ಮೃತ

ಅಣ್ಣಪ್ಪ ಮಲ್ಲಪ್ಪ ಹಿಪ್ಪರಗಿ ಮೃತರಾದರೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಕ್ಲೇಮುದಾರರು ಅಪಘಾತದ ಸಮಯದಲ್ಲಿ ಸುಮಾರು 39 ವರ್ಷ ವಯಸ್ಸಿನ ಪತ್ನಿ, ಸುಮಾರು 13 ವರ್ಷ ವಯಸ್ಸಿನ ಅಪ್ರಾಪ್ತ ಮಗಳು ಹಾಗೂ ಅನುಕ್ರಮವಾಗಿ ಸುಮಾರು 78 ವರ್ಷ ಹಾಗೂ 69 ವರ್ಷ ವಯಸ್ಸಿನವರಾದ ಪೋಷಕರಲ್ಲದೆ ಮತ್ತಾರು ಅಲ್ಲ. ಮೃತರಿಗೆ ಅಪಘಾತದ ಸಮಯದಲ್ಲಿ ಸುಮಾರು 45 ವರ್ಷ ವಯಸ್ಸಾಗಿದ್ದು, ದೃಢಕಾಯರು ಹಾಗೂ ಆರೋಗ್ಯವಂತರಾಗಿದ್ದು ಮಾನಿಕೊ ಇಂಡಿಯಾ ಪ್ರೈ ಲಿಮಿಟೆಡ್ ನಲ್ಲಿ ವಿಭಾಗ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ನಿಶಾನೆ ಪಿ.11 ರಿಂದ ಪಿ.13 ರವರೆಗಿನ ಪ್ರಕಾರ ಪ್ರತೀ ತಿಂಗಳು 90,924/– ರೂ. ಒಟ್ಟು ವೇತನವನ್ನು ಪಡೆದುಕೊಳ್ಳುತ್ತಿದ್ದರು. ಕಡೆಯದಾಗಿ ಅವರ ಸಾವಿನ ಕಾರಣದಿಂದ ಪತ್ನಿಯು ತನ್ನ ಬಾಳಸಂಗಾತಿಯನ್ನು ಕಳೆದುಕೊಂಡಿದ್ದಾರೆ ಹಾಗೂ ಮಗುವು ಜೀವನದಲ್ಲಿ ಪ್ರೀತಿ–ವಾತ್ಸಲ್ಯ, ಮಾರ್ಗದರ್ಶನ, ಸ್ಫೂರ್ತಿ ಹಾಗೂ ಭದ್ರತೆಯನ್ನು ಕಳೆದುಕೊಂಡಿದೆ. ಪೋಷಕರು ತಮ್ಮ ಮಗನ ಉಜ್ವಲ ಭವಿಷ್ಯವನ್ನು ನೋಡುವುದರಿಂದ ವಂಚಿತರಾಗಿದ್ದಾರೆ. ಇದು ಕುಟುಂಬದ ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಮೇಲೂ ಪರಿಣಾಮವನ್ನುಂಟು ಮಾಡಿದೆ.

11. ಮೃತರ ಭತ್ಯೆಗಳು, ಆದಾಯ ತೆರಿಗೆ ಹಾಗೂ ವೃತ್ತಿ ತೆರಿಗೆಯನ್ನು ಕಡಿತಗೊಳಿಸಿದ ನಂತರ ಹಾಗೂ ಮುಂದಿನ ವಿವರಗಳಿಗೆ ಸಂಬಂಧಿಸಿದಂತೆ ಶೇ. 30 ರಷ್ಟನ್ನು ಸೇರಿಸಿದ ಮೇಲೆ ಮೃತರ ಒಟ್ಟು ಮಾಸಿಕ ಆದಾಯವು 95,063/– ರೂ. ಮೊತ್ತವನ್ನು ತಲುಪಿದ ಮೇಲೆ 73,126/– ರೂ. ಗಳ ವಾಸ್ತವಿಕ ವೇತನವನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ನ್ಯಾಯಾಧಿಕರಣವು ಒಟ್ಟಾರೆಯಾಗಿ ತಪ್ಪೆಸಗಿದೆ. ಕ್ಲೇಮುದಾರರು ಹೆಚ್ಚಿನ ವಿವರಗಳಿಗೆ ಸಂಬಂಧಿಸಿದಂತೆ ಶೇ. 30 ರಷ್ಟಕ್ಕೆ ಅವರು ಹಕ್ಕುಳ್ಳವರಾಗಿರುವರು ಎಂಬುದನ್ನು ಸಾಬೀತುಪಡಿಸಲು ಯಾವುದೇ ನಂಬಲರ್ಹವಾದ ದಸ್ತಾವೇಜೀಯ ಸಾಕ್ಷ್ಯವನ್ನು ಅವರು ಹಾಜರುಪಡಿಸಿಲ್ಲವೆನ್ನುವ ಕಾರಣದ ಸಂಬಂಧದಲ್ಲಿ ಅದನ್ನು ಸಮರ್ಥಿಸಲಾಗುವುದಿಲ್ಲ.

12. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ನಿವೇದಿಸಲಾದಂತೆ, ಅಂಗೀಕೃತ ಕಡಿತಗಳು ಮಾತ್ರ ಆದಾಯ ತೆರಿಗೆ ಹಾಗೂ

ವೃತ್ತಿ ತೆರಿಗೆಗಳಾಗಿರುತ್ತವೆ. ನಿಶಾನೆ ಪಿ.11 ರಿಂದ ಪಿ.13ರ ಪ್ರಕಾರ ಮೃತರ ಪ್ರತೀ ತಿಂಗಳಿನ ಮಾಸಿಕ ಆದಾಯ 90,924/– ರೂ. ಗಳಾಗಿರುತ್ತವೆ. ಪ್ರತೀ ವರ್ಷಕ್ಕೆ 10,91,088 ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 2013–14ನೇ ಸಾಲಿನ ನಿರ್ಧರಣೆಗಾಗಿ ಆದಾಯ ತೆರಿಗೆ ನಿಯಮಗಳ ಪ್ರಕಾರ, 1,57,326/– ರೂ.ಗಳ ಆದಾಯ ತೆರಿಗೆಯನ್ನು ಹಾಗೂ 2,400/– ರೂ. ಮೊತ್ತದ ವೃತ್ತೀಯ ತೆರಿಗೆಯನ್ನು. 10,91,088/– ರೂ. ಗಳ ಒಟ್ಟು ವೇತನದಿಂದ ಕಡಿತಗೊಳಿಸಿದರೆ. 9,31,362/– ರೂ. ಮೊತ್ತವು ಉಳಿಯುತ್ತದೆ. ಇದರ ಪೈಕಿ ಕ್ಲೇಮುದಾರರು 4 ಜನರಾಗಿದ್ದಾರೆ ಎಂದರೆ ಪತ್ನಿ, ಮಗಳು ಮತ್ತು ಮೃತರ ಪೋಷಕರು, ಮೃತರ ವೈಯಕ್ತಿಕ ಹಾಗೂ ಜೀವನ ವೆಚ್ಚಗಳ ಸಂಬಂಧದಲ್ಲಿ 1/4 ಭಾಗವನ್ನು ಕಡಿತಗೊಳಿಸಿದರೆ, ನಿವ್ವಳ ಆದಾಯ 6,98,522/– ರೂ. ಗಳಿಗೆ ಬರುತ್ತದೆ. ಮೃತರು ಸುಮಾರು 45 ವರ್ಷ ವಯಸ್ಸಿನವರಾಗಿದ್ದಾರೆ ಹಾಗೂ ಯುಕ್ತ ಗುಣಕವು '14' ಆಗುತ್ತದೆ. ತದನುಸಾರವಾಗಿ, ನ್ಯಾಯಾಧಿಕರಣವು ನೀಡಿದ 1,06,47,145/– ರೂ. ಗಳಿಗೆ ಪ್ರತಿಯಾಗಿ, ಅವಲಂಬನೆಯ ನಷ್ಟದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ 97,79,308/– (6,98,522/–X'14') ರೂ. ಗಳ ನಷ್ಟಪರಿಹಾರವನ್ನು ಮರು–ನಿರ್ಧರಿಸಿರುತ್ತೇವೆ.

13. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ನಿವೇದಿಸಲಾದ ಹಾಗೆ ನ್ಯಾಯಾಧಿಕರಣವು, ಸಾಂಪ್ರದಾಯಿಕ ಶೀರ್ಷಿಕೆಗಳ ಸಂಬಂಧದಲ್ಲಿ ಯುಕ್ತ ನಷ್ಟಪರಿಹಾರವನ್ನು ನೀಡಿರುವುದಿಲ್ಲ. ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯ ಹಾಗೂ ತೀರ್ಪುಗಳ ಸಂಚಯದಲ್ಲಿರುವ ಈ ನ್ಯಾಯಾಲಯದ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು ದಾಂಪತ್ಯ ನಷ್ಟದ ಸಂಬಂಧದಲ್ಲಿ ನ್ಯಾಯಾಧಿಕರಣವು ನೀಡಿದ 50,000/– ರೂ. ಗಳಿಗೆ ಪ್ರತಿಯಾಗಿ 1,00,000/– ರೂ. ಗಳನ್ನು; ಹಾಗೂ ಪ್ರೀತಿ ವಾತ್ಸಲ್ಯದ ನಷ್ಟದ ಸಂಬಂಧದಲ್ಲಿ ಪ್ರತೀ ಕ್ಲೇಮುದಾರರಿಗೆ 20,000/– ರೂ. ಗಳಿಗೆ ಪ್ರತಿಯಾಗಿ 25,000/– ರೂ. ದರದಲ್ಲಿ 1,00,000/– ರೂ. ಗಳನ್ನು; ಸಂಪದ ನಷ್ಟದ ಸಂಬಂಧದಲ್ಲಿ 10,000/– ರೂ. ಗಳಿಗೆ ಪ್ರತಿಯಾಗಿ

25,000/– ರೂ. ಗಳನ್ನು ಹಾಗೂ ಸಾಗಣೆ ಹಾಗೂ ಅಂತ್ಯ ಸಂಸ್ಕಾರ ವೆಚ್ಚದ ಸಂಬಂಧದಲ್ಲಿ 10,000/– ರೂ. ಗಳಿಗೆ ಪ್ರತಿಯಾಗಿ 25,000/– ರೂ. ಗಳನ್ನು ನಾವು ಸೂಕ್ತವೆಂದು ಭಾವಿಸಿರುತ್ತೇವೆ. ಹಾಗಾಗಿ 12,92,163/– ರೂ. ಗಳನ್ನು ಹೆಚ್ಚಿಸಬೇಕಾಗುತ್ತದೆ. ವಿಂಗಡಣೆಯು ಈ ಮುಂದಿನಂತಿರುತ್ತದೆ:

| | |
|---|---|
| ಅವಲಂಬನೆ ನಷ್ಟದ ಸಂಬಂಧದಲ್ಲಿ | 97,79,308/– ರೂ. ಗಳು |
| ದಾಂಪತ್ಯ ನಷ್ಟ ಸಂಬಂಧದಲ್ಲಿ | 1,00,000/– ರೂ. ಗಳು |
| ಪ್ರೀತಿ ವಾತ್ಸಲ್ಯ ನಷ್ಟದ ಸಂಬಂಧದಲ್ಲಿ (25,000 X 4) | 1,00,000/– ರೂ. ಗಳು |
| ಸಂಪದ ನಷ್ಟದ ಸಂಬಂಧದಲ್ಲಿ | 25,000/– ರೂ. ಗಳು |
| ಮೃತದೇಹ ಸಾಗಣೆ ಹಾಗೂ ಅಂತ್ಯಸಂಸ್ಕಾರದ ಸಂಬಂಧದಲ್ಲಿ | 25,000/– ರೂ. ಗಳು |
| ಒಟ್ಟು | 1,00,29,308/– ರೂ. ಗಳು |

14. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ನಿವೇದಿಸಲಾದ ಹಾಗೆ, ನ್ಯಾಯಾಧಿಕರಣವು ನೀಡಿದ ಬಡ್ಡಿದರವು ಕಡಿಮೆಯಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಹಾಗೂ ತೀರ್ಪುಗಳ ಸಮುಚ್ಚಯದಲ್ಲಿರುವ ಈ ನ್ಯಾಯಾಲಯದ ತೀರ್ಪುಗಳನ್ನು ಅನುಸರಿಸಿ, ನಾವು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಗದಿನ ರೂಪ ತಳೆಯುವವರೆಗೆ ಹೆಚ್ಚಿಸಲಾದ ನಷ್ಟಕ್ಕೆ ಪ್ರತೀ ವರ್ಷ ಶೇಕಡಾ 9 ರಷ್ಟು ಬಡ್ಡಿಯ ದರವನ್ನು ನಾವು ಐತೀರ್ಪು ನೀಡಿರುತ್ತೇವೆ.

15. ಮೇಲೆ ನಿರೂಪಿಸಲಾದಂಥ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳ ಬೆಳಕಿನಲ್ಲಿ ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ. IIIನೇ ಹೆಚ್ಚುವರಿ

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯರು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ ಬೆಂಗಳೂರು (ಎಸ್‌ಸಿಸಿಎಚ್–18) ಇವರು ಎಂವಿಸಿ ಸಂ.2553/2012 ರಲ್ಲಿ ಹೊರಡಿಸಿದ ದಿನಾಂಕ 6ನೇ ನವೆಂಬರ್ 2013ರ ಪ್ರಶ್ನಿತ ತೀರ್ಪು ಹಾಗೂ ಐತೀರ್ಪನ್ನು, ಈ ಮೂಲಕ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಹಣ ನಗದಾಗುವವರೆಗೆ ಹೆಚ್ಚಿಸಲಾದ 12,92,163/– ರೂ. ನಷ್ಟ ಪರಿಹಾರಕ್ಕೆ ಪ್ರತೀ ವರ್ಷಕ್ಕೆ ಶೇಕಡಾ 9ರ ಬಡ್ಡಿಯೊಂದಿಗೆ ನ್ಯಾಯಾಧಿಕರಣವು ನೀಡಿದ 87,37,145/– ರೂ. ಗಳಿಗೆ ಪ್ರತಿಯಾಗಿ 1,00,29,308/– ರೂ. ಗಳ ಒಟ್ಟು ನಷ್ಟ ಪರಿಹಾರವನ್ನು ನೀಡಲು ಈ ಮೂಲಕ ಮಾರ್ಪಾಟು ಮಾಡಲಾಗಿದೆ.

ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಗದೀಕರಣದ ದಿನಾಂಕದವರೆಗೆ ಪ್ರತೀ ವರ್ಷಕ್ಕೆ ಶೇಕಡಾ 9ರ ಬಡ್ಡಿ ದರದೊಂದಿಗೆ ಈ ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವಾರಗಳೊಳಗೆ 12,92,163/– ರೂ. ಗಳ ಹೆಚ್ಚಿಸಲಾದ ನಷ್ಟ ಪರಿಹಾರವನ್ನು ಠೇವಣಿಯಾಗಿಡಲು ಎದುರುದಾರ ಸಂ.2 – ವಿಮಾಗಾರನಿಗೆ ನಿರ್ದೇಶಿಸಲಾಗಿದೆ.

ಹೆಚ್ಚಿಸಲಾದ 12,92,163/– ರೂ. ಗಳ ನಷ್ಟ ಪರಿಹಾರದ ಪೈಕಿ ಯುಕ್ತ ಬಡ್ಡಿಯೊಂದಿಗೆ 5,00,000/– ರೂ. ಗಳನ್ನು ಯಾವುದೇ ರಾಷ್ಟ್ರೀಕೃತ / ಅನುಸೂಚಿತ/ ಗ್ರಾಮೀಣ ಬ್ಯಾಂಕಿನಲ್ಲಿ 1ನೇ ಅಪೀಲುದಾರ – ಶ್ರೀಮತಿ ರಾಜೇಶ್ವರಿ ಜಿ. ಭೂಯರ್ ರವರ ಹೆಸರಿನಲ್ಲಿ 15 ವರ್ಷಗಳ ಅವಧಿಯವರೆಗೆ ಹಾಗೂ ಅದಕ್ಕೆ ಪ್ರಾಪ್ತವಾಗುವ ನಿಯತ ಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಅವಳಿಗೆ ಸ್ವಾತಂತ್ರ್ಯ ನೀಡುವುದರೊಂದಿಗೆ ಮತ್ತೆ ಹದಿನೈದು ವರ್ಷಗಳಿಗೆ ನವೀಕರಿಸಬಹುದಾದ ಅವಧಿಗೆ ಠೇವಣಿಯಾಗಿಡತಕ್ಕದ್ದು.

ಯುಕ್ತ ಬಡ್ಡಿಯೊಂದಿಗೆ 4,00,000/– ರೂ. ಗಳ ಮೊತ್ತವನ್ನು ಅಪೀಲುದಾರ ಸಂ.2 – ಮಗು ಅಪೇಕ್ಷಾಳ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ / ಅನುಸೂಚಿತ/ ಗ್ರಾಮೀಣ ಬ್ಯಾಂಕ್‌ನಲ್ಲಿ, ಅವಳಿಗೆ 21 ವರ್ಷ ವಯಸ್ಸು ತುಂಬುವವರೆಗೆ, ಅವಳ

ಕ್ಷೇಮಕ್ಕಾಗಿ ಅದಕ್ಕೆ ಪ್ರಾಪ್ತವಾಗುವ ನಿಯತಕಾಲಿಕ ಬಡ್ಡಿಯನ್ನು ಹಿಂಪಡೆದುಕೊಳ್ಳಲು ಅಪೀಲುದಾರ ಸಂ.1 / ತಾಯಿ ಹಾಗೂ ವಾಸ್ತವಿಕ ಪೋಷಕರಿಗೆ ಸ್ವಾತಂತ್ರ್ಯವನ್ನು ನೀಡುವುದರೊಂದಿಗೆ ಹಣವನ್ನು ನಿಶ್ಚಿತ ಠೇವಣಿಯಾಗಿಡತಕ್ಕದ್ದು. ಹಾಗೂ 22 ವರ್ಷಗಳಿಂದ 30 ವರ್ಷಗಳವರೆಗೆ ಅಪೀಲುದಾರ ಸಂ.2 ನಿಯತಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಹಕ್ಕುಳ್ಳವಳಾಗಿರುವಳು.

ಯುಕ್ತ ಬಡ್ಡಿಯೊಂದಿಗೆ 1,00,000/– ರೂ. ಗಳನ್ನು 4 ನೇ ಅಪೀಲುದಾರರಾದ – ಮೃತರ ತಾಯಿಯ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ / ಅನುಸೂಚಿತ / ಗ್ರಾಮೀಣ ಬ್ಯಾಂಕ್‌ನಲ್ಲಿ ಐದು ವರ್ಷಗಳ ಅವಧಿವರೆಗೆ ಠೇವಣಿಯಾಗಿಡತಕ್ಕದ್ದು ಹಾಗೂ ಅದಕ್ಕೆ ಪ್ರಾಪ್ತವಾಗುವ ನಿಯತಕಾಲಿಕ ಬಡ್ಡಿಯನ್ನು ಹಿಂತೆಗೆದುಕೊಳ್ಳಲು ಅವರಿಗೆ ಸ್ವಾತಂತ್ರ್ಯ ನೀಡುವುದರೊಂದಿಗೆ ಮತ್ತೆ ಐದು ವರ್ಷಗಳ ಅವಧಿಗೆ ಅದನ್ನು ನವೀಕರಿಸಿಕೊಳ್ಳಬಹುದು.

ಉಳಿದ 2,92,163/– ರೂ.ಗಳನ್ನು ಯುಕ್ತ ಬಡ್ಡಿಯೊಂದಿಗೆ 1ನೇ, 3ನೇ ಹಾಗೂ 4ನೇ ಅಪೀಲುದಾರರ ಹೆಸರಿನಲ್ಲಿ, ಸಮಾನ ಪ್ರಮಾಣದಲ್ಲಿ ಎದುರುದಾರ ಸಂ.2 – ವಿಮಾಗಾರನು ಠೇವಣಿಯಾಗಿಟ್ಟ ಹಣದಲ್ಲಿ ಕೂಡಲೇ ಬಿಡುಗಡೆ ಮಾಡತಕ್ಕದ್ದು.

ಕಚೇರಿಯು ಐತೀರ್ಪನ್ನು ತದನುಸಾರವಾಗಿ ಪಡೆದುಕೊಳ್ಳುವುದು.

ಶ್ರೀ ಬಿ. ಪ್ರದೀಪ್ ಮಾನ್ಯ ವಕೀಲರು ಇವರಿಗೆ, ಮೂರು ವಾರಗಳೊಳಗೆ ಎದುರುದಾರ ಸಂ.2ರ ಪರವಾಗಿ ವಕಾಲತ್ತನ್ನು ಸಲ್ಲಿಸಲು ಅನುಮತಿಸಲಾಗಿದೆ.

---